ಆದರೆ, ಏಕಾಏಕಿ ಉಂಟಾದ ಸಮಸ್ಯೆಯಿಂದಾಗಿ ಹೋಟೆಲ್ ಬುಕ್ಕಿಂಗ್ ಮಾಡಿದವರು ಕೂಡ ತಮ್ಮ ಹಣವನ್ನು ಹಿಂದಿರುಗಿಸುವಂತೆ ಕೋರಿಕೊಂಡಿದ್ದಾರೆ. ಹೀಗಾಗಿ ಇದ್ದ ಅಲ್ಪ ಆದಾಯವೂ ಕೈ ತಪ್ಪಿ ಹೋಗಿದೆ. ಇದರಿಂದಾಗಿ ಕೆಲವು ಹೋಟೆಲ್‌ಗಳು ಮುಚ್ಚಿಹೋದರೆ, ಇನ್ನು ಕೆಲವು ತಮ್ಮ ಬಳಗದಲ್ಲಿ ಬಹುತೇಕ ಉದ್ಯೋಗ ಕಡಿತಗೊಳಿಸಿವೆ.

## ಮಣ್ಣು ಸೇರಿದ ಟುಲಿಪ್‌ಗಳು

ಏಪ್ರಿಲ್ ಮತ್ತು ಮೇ ತಿಂಗಳೆಂದರೆ ಟುಲಿಪ್ ಹೂವುಗಳು ಚಿನ್ನದ ಮೊಟ್ಟೆಗಳನ್ನಿಡುವ ಕಾಲ. ನೆದರ್‌ಲ್ಯಾಂಡ್‌ನ ನೂರಾರು ಎಕರೆ ಪ್ರದೇಶಗಳು ಸಂಪೂರ್ಣವಾಗಿ ಟುಲಿಪ್ ಹೂವುಗಳಿಗೆ ಮೀಸಲಾಗಿವೆ. ವಸಂತ ಋತು ಆರಂಭವಾಗುತ್ತಿದ್ದಂತೆ ಟುಲಿಪ್ ಹೂವುಗಳ ಬಿಕರಿ ಆರಂಭವಾಗುತ್ತಿತ್ತು. ವಿಶ್ವದೆಲ್ಲೆಡೆ ಟುಲಿಪ್‌ಗಳ ರವಾನೆಯಾಗುತ್ತಿತ್ತು. ಆದರೆ ಕೋವಿಡ್ ವೈರಾಣುವಿನಿಂದಾಗಿ ಎಲ್ಲವೂ ಮಣ್ಣು ಪಾಲು. ಸುಮಾರು 400 ದಶಲಕ್ಷ ಟುಲಿಪ್ ಹೂವುಗಳನ್ನು ನಾಶಪಡಿಸಲಾಗಿದೆ. ನೂರಾರು ಎಕರೆ ಪ್ರದೇಶದಲ್ಲಿನ ಹೂವುಗಳನ್ನು ಬುಲ್ಡೋಜರ್ ಮೂಲಕ ಕಿತ್ತೊಗೆಯಲಾಗಿದೆ. 'ನಗುತ್ತ ನಿಂತಿದ್ದ ಹೂಗಳ ಮೇಲೆ ಬುಲ್ಡೋಜರ್ ಆರ್ಭಟವನ್ನು ನೋಡಲಾಗಲಿಲ್ಲ. ಈ ಸಂದರ್ಭದಲ್ಲಿ ನನ್ನ ಸೈಕಲ್ ತೆಗೆದುಕೊಂಡು ಮನೆ ಬಿಟ್ಟು ಹೋಗಿದ್ದೆ' ಎಂದು ರೈತನೋರ್ವ ನೋವಿನಿಂದ ನುಡಿದಿದ್ದಾನೆ.

ಟುಲಿಪ್ ಹೂವಿನ ಪ್ರಮುಖ ಆಕರ್ಷಣೆಯೆಂದರೆ ನೆದರ್‌ಲ್ಯಾಂಡ್‌ನ ಕೂಕನ್ ಹಾಫ್ ಗಾರ್ಡನ್. ಅಲ್ಲಿ 70 ಲಕ್ಷ ಹೂವುಗಳು ಪ್ರತಿ ವರ್ಷ ಪ್ರವಾಸಿಗರಿಗೆ ಮುದ ನೀಡುತ್ತವೆ. ಆದರೆ ಈ ಬಾರಿ ಉದ್ಯಾನವನವನ್ನು ತೆರೆಯುವ ಮುನ್ನವೇ ಬಾಗಿಲು ಭದ್ರ ಮಾಡುವ ಪರಿಸ್ಥಿತಿ ಎದುರಾಯಿತು. ಕನಿಷ್ಠ 10 ಲಕ್ಷ ಮಂದಿ ಪ್ರತಿ ವರ್ಷ ಟುಲಿಪ್ ಹೂವುಗಳನ್ನು ನೋಡಲು ವಿಶ್ವದೆಲ್ಲೆಡೆಯಿಂದ ಆಗಮಿಸುತ್ತಿದ್ದರು.



ಇತಿಹಾಸದ ಪಿಸುಮಾತುಗಳನ್ನು ಕೇಳಿಸಿಕೊಳ್ಳುವವರ ಗೈರುಹಾಜರಿನಿಂದಾಗಿ ಕಳಾಹೀನವಾಗಿರುವ ಸ್ಮಾರಕಗಳು



ಪ್ರವಾಸಿಗರ ಕಣ್ಣುಗಳನ್ನು ತಣಿಸಬೇಕಿದ್ದ ಟುಲಿಪ್‌ಗಳು ಮಣ್ಣುಪಾಲಾಗುತ್ತಿವೆ



ಅಲೆಗಳ ಸದ್ದಿನ ಹೊರತಾಗಿ ಕಡಲ ತೀರಗಳಲ್ಲೀಗ ಅಸಹನೀಯ ಮೌನ

## ಇಕ್ಕಟ್ಟಿನಲ್ಲಿ ಇಟಲಿ-ಸ್ಪೇನ್

ಇಟಲಿಯಲ್ಲಿ ಕೋವಿಡ್ ವೈರಾಣುವಿನಿಂದಾಗಿ ಉಂಟಾದ ಆಘಾತಕಾರಿ ಪರಿಸ್ಥಿತಿ ಎಲ್ಲರಿಗೂ ತಿಳಿದಿರುವ ಸಂಗತಿ. ಇದರಿಂದಾಗಿ ಸಾಲು ಸಾಲು ಸ್ಮಾರಕಗಳು, ಹಳೆಯ ಮ್ಯೂಸಿಯಂಗಳು, ಸಮುದ್ರ ತಟಗಳು ಎಲ್ಲವೂ ಬಣಗುಡುತ್ತಿವೆ. ಕೆಲವೊಂದು ಮ್ಯೂಸಿಯಂಗಳು ಶಾಶ್ವತವಾಗಿ ಬಾಗಿಲೆಳೆದುಕೊಂಡಿವೆ.

ಇಟಲಿಯಂತೆ ಸ್ಪೇನ್ ಕೂಡ ವೈರಾಣುವಿನಿಂದ ತತ್ತರಿಸಿದೆ. ಸದಾ ಪ್ರವಾಸಿಗರಿಂದ ಗಿಜಿಗುಡುತ್ತಿದ್ದ ನಗರಗಳೆಲ್ಲ ಕಳೆಗುಂದಿವೆ. ಮನರಂಜನಾ ಕ್ಷೇತ್ರದ ಮುಂಚೂಣಿಯಲ್ಲಿದ್ದ ದೇಶದಲ್ಲಿ ಎಲ್ಲವೂ ಖಾಲಿ ಖಾಲಿ. ಸಮುದ್ರ ತಟಗಳಲ್ಲಿ ಸೂರ್ಯನಿಗೆ ಮೈಯೊಡ್ಡಿ ಮಲಗುತ್ತಿದ್ದ ಪ್ರವಾಸಿಗರು ಮನೆಯಿಂದ ಹೊರಗೆ ಕಾಲಿಡುತ್ತಿಲ್ಲ. ರಾತ್ರಿ ನಡೆಯುತ್ತಿದ್ದ ಸಂಗೀತ ಪಾರ್ಟಿಗಳೆಲ್ಲ ಬಾಗಿಲು ಮುಚ್ಚಿವೆ. ಸಮುದ್ರದ ಅಲೆಗಳ ಹೊರತಾಗಿ ಇನ್ನಾವ ಶಬ್ದಗಳೂ ಕೇಳಿ ಬರುತ್ತಿಲ್ಲ.

ಫ್ರಾನ್ಸ್, ಗ್ರೀಸ್, ಜರ್ಮನಿ ಹೀಗೆ ಬಹುತೇಕ ಎಲ್ಲ ಯಾವ ಯೂರೋಪ್ ರಾಷ್ಟ್ರದ ಪರಿಸ್ಥಿತಿಯೂ ಹೇಳಿಕೊಳ್ಳುವಂತಿಲ್ಲ. ಎಲ್ಲ ರಾಷ್ಟ್ರಗಳೂ ತಮ್ಮ ಗಡಿಗಳನ್ನು ಮುಚ್ಚಿಕೊಂಡು, ವಿಮಾನ ಹಾರಾಟವನ್ನು ಸ್ಥಗಿತಗೊಳಿಸಿವೆ. ಈ ಹಿಂದೆ ಆಟೊಮೊಬೈಲ್ ಕ್ಷೇತ್ರ ಆರ್ಥಿಕ ಸಂಕಷ್ಟದಲ್ಲಿ ಮುಳುಗಿತ್ತು. ಇದೀಗ ಗಾಯದ ಮೇಲೆ ಬರೆ ಎಳೆದಂತೆ ಪ್ರವಾಸೋದ್ಯಮ ನೆಲಕಚ್ಚಿದೆ. ಕೆಲವು ದೇಶಗಳು 2020ರಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದರೆ, ಮತ್ತೆ ಕೆಲವು ದೇಶಗಳು ಪ್ರವಾಸೋದ್ಯಮ ಆರಂಭಿಸಲು ಚಿಂತನೆ ನಡೆಸುತ್ತಿವೆ. ಆದರೆ ಪ್ರವಾಸಿಗಳು ಮನೆಬಿಟ್ಟು ಹೊರಡುವ ಮನಸ್ಥಿತಿಯಲ್ಲಿಲ್ಲ.

ಸದ್ಯದ ಪರಿಸ್ಥಿತಿ ಅವಲೋಕಿಸಿದರೆ 2022ರರೆಗೂ ಪ್ರವಾಸೋದ್ಯಮ ಚೇತರಿಸಿಕೊಳ್ಳುವುದು ಕಷ್ಟಸಾಧ್ಯ ಎನ್ನುವುದು ತಜ್ಞರ ಅಂದಾಜು. ಈ ಅನಿಶ್ಚಿತತೆಯ ದಿನಗಳು ಎಂದು ಕಳೆಯುತ್ತವೆಯೋ ಎಂದು ಜಗತ್ತು ಕಾಯುತ್ತಿದೆ. ಸುಂದರ ದಿನಗಳು ಬಹುಬೇಗನೆ ಮರಳಿ ಪ್ರವಾಸಿ ತಾಣಗಳೆಲ್ಲ ಮತ್ತೆ ಕಳೆಗಟ್ಟಲಿ ಎನ್ನುವುದು ಪ್ರವಾಸಪ್ರಿಯರ ಪ್ರಾರ್ಥನೆ. ■